# ಚಿನ್ನದ ಪರಿಶುದ್ಧತೆ ಕ್ವಾಂಟಮ್ ನಿಂದ ಸುಧಾರಿತ ಮಾಪಕ ಬಿಡುಗಡೆ

ಬೆಂಗಳೂರು : ಜುವೆಲ್ಲರಿ ಕ್ಷೇತ್ರದಲ್ಲಿ ಚಿನ್ನದ ಪರಿಶುದ್ಧತೆಯನ್ನು ಅಳೆಯಲು ಎಕ್ಸ್ ರೇ ಫ್ಲೋರೋಸೆನ್ಸ್ ಮತ್ತು ಲೇಸರ್ ತಂತ್ರಜ್ಞಾನವನ್ನು ಪರಿಚಯಿಸಿದ ಕ್ವಾಂಟಮ್ ಇಕ್ವಿಪ್‌ಮೆಂಟ್ ಕಂಪೆನಿ ಈಗ ಕರ್ನಾಟಕದಲ್ಲಿ ಕ್ಯಾರಟ್‌ಮೀಟರ್ ಒರಾ ಸೂಪರ್ ಗೋಲ್ಡ್ ಮಿಶ್ರಣ ವಿಶ್ಲೇಷಕವನ್ನು ಬಿಡುಗಡೆ ಮಾಡಿದೆ. ಅತಿ ಹೆಚ್ಚು ರೆಸಲ್ಯೂಷನ್‌ನ ಸಿಲಿಕಾನ್ ಡ್ರಿಫ್ಟ್ ಪತ್ತೆ ಹಚ್ಚುವ ಮಾಪಕ (ಎಸ್‌ಡಿಡಿ) ಇದಾಗಿದೆ. ಜರ್ಮನಿಯ ಬ್ರೂಕರ್ ನ್ಯಾನೋ ಕಂಪೆನಿಯೊಂದಿಗೆ ಪಾಲುದಾರಿಕೆ ಹೊಂದಿರುವ ಕ್ವಾಂಟಮ್ ಕಳೆದ 50 ವರ್ಷಗಳಿಂದ ಅತಿ ಸೂಕ್ಷ್ಮ ಪ್ರಮಾಣದ ವಿಶ್ಲೇಷಕ ಯಂತ್ರಗಳನ್ನು ಪರಿಚಯಿಸುತ್ತಿದೆ. ಹೊಸದಾಗಿ ಬಿಡುಗಡೆ ಮಾಡಿರುವ ಎಸ್‌ಡಿಡಿ ಐಎಸ್‌ಒ ಮಾನದಂಡಗಳಿಗೆ ಅಗತ್ಯವಿರುವ ಅಂಶಗಳಿಗಿಂತಲೂ ಅತ್ಯಂತ ಕರಾರುವಕ್ಕಾಗಿದ್ದು, ಇದುವರೆಗೆ ಮಾರುಕಟ್ಟೆಯಲ್ಲಿರುವ ಯಾವುದೇ ಮಾಪಕಗಳಿಗಿಂತ 121 ಇವಿ ರೆಸೊಲ್ಯೂಷನ್ ಹೊಂದಿರುವ ಏಕೈಕ ಡಿಟೆಕ್ಟರ್ ಎನಿಸಿಕೊಂಡಿದೆ.